Contribution paid by the Market Committees to the Consolidated Fund

801. Sri A. G. KODGI (Baindur).—

Will the Minister for Co-operation be pleased to state :—

the total contribution paid by the Market Committees in the State from 1968-69 to 1971-72 under Section 91 of the Mysore Agricultural Produce Marketing (Regulations) Act., to the consolidated fund and the total expenditure incurred in this regard during the above period (Committeewise particulars may be furnished) ?

Sri A. SHANKARA ALVA (Minister for Co-operation).—

Vide Statement placed on the Table of the House. *

ಶ್ರೀ ಎ. ಜಿ. ಕೊಡಗಿ.—ತಾವು ಕೊಟ್ಟಿರುವ ತಃಖ್ತೆಯನ್ನು ಪರಿಶೀಲಿಸಿದರೆ ಗೊತ್ತಾಗುತ್ತದೆ. 1968-69ರಲ್ಲಿ 13 ಲಕ್ಷ ರೂಪಾಯಿಗಳಲ್ಲಿ ಶೇಕಡ 65 ಪರ್ಸೆಂಟ್ ವಂತಿಕೆ ಇದ್ದರೆ 1969-70ರಲ್ಲಿ 4ಲಕ್ಷದ 67 ಸಾವಿರದ 578 ರೂಪಾಯಿ ಇದೆ. 1971-72ರಲ್ಲಿ 22 ಲಕ್ಷದ 975 ರೂಪಾಯಿಗಳಷ್ಟು ಮಾರ್ಕೆಟಿಂಗ್ ಕಮಿಟಿ ವಂತಿಗೆ ಹೆಚ್ಚಿಗೆ ಉಂಟು. ಒಂದು ಅಂಶ ಇಲ್ಲಿ ತಮ್ಮ ಗಮನಕ್ಕೆ ತರಬೇಕಾಗಿದೆ. ಸೆಕ್ಷನ್ 91ರ ಪ್ರಕಾರ ನಿಗದಿ ಮಾಡಿದಾಗ ಇದು ಸರ್ಕಾರಿ ನೌಕರರ ಸಂಬಳ ಭತ್ತೆಗೆ ಅನುಗುಣವಾಗಿ ಇದೆಯೇ ಎಂಬುದನ್ನು ಪರಿಶೀಲಿಸಿದಾಗ ವ್ಯತ್ಯಾಸ ಕಾಣುತ್ತದೆ. ಅದು ವಂತಿಕೆಗೆ ಹೊಂದಾಣಿಕೆಯಾಗಿಲ್ಲ ಎಂದು ನನ್ನ ಭಾವನೆ ಎಂದು ಹೇಳುತ್ತೇನೆ.

ಶ್ರೀ ಎ. ಶಂಕರ ಅಳ್ವ.—ಸರ್ಕಾರದವರು ಹೇಳಿದ್ದು ಸರಿ. ಆದರೆ ಎಸ್ಟಿಮೇಟ್ ಮಾಡುವಾಗ ಎಲೆಕ್ಷನ್‌ಮಟ್ಟಿಗೆ ಕೆಲವು ನೌಕರರಿಗೆ ಸರ್ಕಾರಿ ನೌಕರರು ಎಂದು ಮಾಡುವುದಕ್ಕೆ ಅಂದಾಜು ಮಾಡಿದ್ದೇವೆ ಖರ್ಚು ಕಡಿಮೆಯಾಗಿದೆ, ವಸೂಲು ಮಾಡುವುದು ಜಾಸ್ತಿಯಾಗಿದೆ. ಆವರ ನಂತರ 30 ಪರ್ಸೆಂಟ್ ಇರುವುದನ್ನು 25ಕರ್ಸೆಂಟ್‌ಗೆ ಕಡಿಮೆ ಮಾಡಿದ್ದೇವೆ. 1-4-73ಕ್ಕೆ 20 ಪರ್ಸೆಂಟಿಗೆ ಇಳಿಸಿದ್ದೇವೆ. ಲೆಕ್ಕ ಆದನಂತರ ರೀ ಫಂಡ್ ಮಾಡುತ್ತೇವೆ

ಶ್ರೀ ಎ. ಜಿ. ಕೊಡಗಿ.—'0 ಪರ್ಸೆಂಟ್‌ನಿಂದ 20 ಪರ್ಸೆಂಟ್‌ಗೆ ಇಳಿಸಿದ್ದೀರಿ. 25ರಿಂದ 20ಕ್ಕೆ ಇಳಿಸುತ್ತೇವೆಂದು ಹೇಳುತ್ತಿದ್ದೀರಿ. ಆಲ್ಲ ಇರುವ ಸಮಸ್ಯೆ ಮುಂದಿನ ವಷ-ದ ಉತ್ಪನ್ನ ಮತ್ತು ವೆಚ್ಚಗಳನ್ನು ಪರಿಶೀಲಿಸಿದರೆ ಹೆಚ್ಚು ಉಂಟು ಒಂದೇ ಸಲ ಹಣಕೊಡಬೇಕು ಎಂದು ಇದೆ. ಹೆಚ್ಚು ವಸೂಲು ಮಾಡಿದ್ದೀರಿ. ಅದನ್ನು ಮಾರ್ಕೆಟಿಂಗ್ ಕಮಿಟಿಗೆ ಮರು ಪಾವತಿ ಮಾಡುವ ಆದೇಶ ಕೊಡುತ್ತೀರಾ ! ಈ ದೃಷ್ಟಿಯನ್ನು ಮನಸ್ಸಿನಲ್ಲಿ ಇಟ್ಟುಕೊಂಡು ಕಡಿಮೆ ಪರ್ಸೆಂಟೀಜ್ ಫಿಕ್ಸ್ ಮಾಡುವುದಕ್ಕೆ ಆದೇಶ ಕೊಡುತ್ತೀರಾ !

ಶ್ರೀ ಎ. ಶಂಕರ ಅಳ್ವ.—ಕೆಲವು ಜನರಿಗೆ ಸರ್ಕಾರಿ ನೌಕರರಾಗಿ ತೆಗೆದುಕೊಂಡಿದ್ದೇವೆ· ಮೊದಲು ಸರ್ಕಾರಿ ನೌಕರರಾಗಿರಲಿಲ್ಲ. ಅನೇಕ ಜನರಿಗೆ ಗವರ್ನಮೆಂಟ್ ಸರ್ವೆಂಟ್ಸ್ ಎಂದು ಪರಿಗಣಿಸಿದ ನಂತರ ಸ್ವಲ್ಪ ಖರ್ಚು ಹೆಚ್ಚಾಗಲಿಕ್ಕೆ ಸಾಕು. ಅದನ್ನು ಇನ್ನು ಪರಿಶೀಲಿಸಿ ಎಷ್ಟು ಕಡಿಮೆ ಮಾಡಬೇಕು ನೋಡುತ್ತೇವೆ.

ಶ್ರೀ ಎಚ್. ಎಸ್. ಸಿದ್ದಪ್ಪ.—ಕಡಿಮೆ ಖರ್ಚು ಆಗಿದೆ. ಹೆಚ್ಚು ವಸೂಲು ಮಾಡಿ ಮತ್ತೆ 25 ಪರ್ಸೆಂಟ್ ಕಡಿಮೆ ಮಾಡುವುದಕ್ಕೆ ಬದಲು ಇರಾಖೆ ಅಧಿಕಾರಿಗಳು ಹೆಚ್ಚು ಖರ್ಚುಮಾಡುವ ಮಾರ್ಗ ಯೋಚನೆ ಮಾಡಿ ಹೆಚ್ಚು ಖರ್ಚು ಮಾಡುವ ಮಾರ್ಗ ತೋರಿಸುತ್ತಾರೆ. ಅದನ್ನು ಕಡಿಮೆ ಮಾಡುವ ಬಗ್ಗೆ ಏನು ನೀತಿ ಇಟ್ಟಿದ್ದೀರಿ ?

---

* Copy placed in the Mysore Legislature Library *vide* No. 21 dated 18-6-1973.

ಶ್ರೀ ಎ. ಶಂಕರ ಆಳ್ವ.—ಎಸ್ಟಿಮೇಟ್ ಮಾಡುವಾಗ ಪರ್ಸಂಟೇಜ್ ಜಾಸ್ತಿ ಫಿಕ್ಸ್ ಮಾಡುತ್ತೇವೆ. ಕೆಲವು ಕಡೆ ಒಂದೆರಡು ವರ್ಷಗಳಲ್ಲಿ ಎರೆಕ್ಷನ್ ಇರಲಿಲ್ಲ. ಎರೆಕ್ಷನ್‌ಗೆ ಖರ್ಚು ಮಾಡಬೇಕು ಎಂದು ಲೆಕ್ಕಕ್ಕೆ ಹಿಡಿದಿದ್ದಾರೆ. ಕೆಲವರನ್ನು ಗಾರ್ನಮೆಂಟ್ ನರ್ವ್ಂಟ್ ಎಂದು ಪರಿಗಣಿಸಬೇಕು, ಸರ್ಕಾರಿ ಸಂಬಳ ಕೊಡಬೇಕು ಅದನ್ನು ಮಾರ್ಕೆಟಿಂಗ್ ಕಮಿಟಿಯಿಂದ ತೆಗೆದುಕೊಳ್ಳಬೇಕಾಗುತ್ತದೆ. ಎಸ್ಟಿಮೇಟ್ ಮಾಡುವಾಗ ಇಷ್ಟೇ ಖರ್ಚಾಗುತ್ತದೆ ಎಂದು ಗೊತ್ತಾಗುವುದಿಲ್ಲ. ಜಾಸ್ತಿ ಎಸ್ಟಿಮೇಟ್ ಮಾಡಿ ತೆಗೆದುಕೊಂಡಿದ್ದಾರೆ ಅದನ್ನು ಕಡಿಮೆ ಮಾಡುತ್ತಾ ಬರುತ್ತಾರೆ. ಜಾಸ್ತಿ ಇದ್ದದನ್ನು ಪ್ರತಿಯೊಂದು ಕಡೆ ಕಮಿಟಿಗೆ ರೀ ಫಂಡ್ ಮಾಡುತ್ತಾರೆ.

Communication facilities in some villages of Coondapur Taluk

806. **Sri A. G. KODGI** (Baindur).—

Will the Minister for Public Works and Electricity be pleased to state:—

(*a*) the number of villages in Coondapur Taluk (South Kanara) which have no access to roads during the monsoon ;

(*b*) whether there are any proposals before the Government to provide communication facilities to those villages ;

(*c*) the number of bridges that are needed on the above roads and the estimated costs of the same ?

Sri H. M. CHANNABASAPPA (Minister for Public Works and Electricity).—

(*a*) 25 villages.

(*b*) Yes. For twelve villages.

(*c*) 26 bridges at an approximat cost of Rs. 75.00 lakhs.

ಶ್ರೀ ಎ. ಜಿ. ಕೊಡಗಿ.—ತಾವು ಉತ್ತರದಲ್ಲಿ ಹೇಳಿದ್ದೀರಿ ಕುಂದಾಪುರ ತಾಲ್ಲೂಕಿನ 25ಗ್ರಾಮಗಳಿಗೆ ಮಾನ್‌ಸೂನ್ ಕಾಲದಲ್ಲಿ ಸಾರಿಗೆ ಸಂಪರ್ಕ ವ್ಯವಸ್ಥೆಯಿಲ್ಲ ಎಂದು. ಸ್ವಾತಂತ್ರ್ಯ ಬಂದು ಕಳೆದ 25 ವರ್ಷಗಳಾದರೂ 25 ಊರುಗಳಿಗೆ ಸಾರಿಗೆ ಸಂಪರ್ಕ ವ್ಯವಸ್ಥೆ ಇಲ್ಲ ಎಂದರೆ ಬಹಳ ಅತ್ಯಪಿತ್ತಿಕರವಾಗಿ ಕಾಣುತ್ತದೆ. ಈ ದಿಶೆಯಲ್ಲಿ ಸಂಪರ್ಕ ವ್ಯವಸ್ಥೆಯನ್ನು ಸರಿಯಾಗಿ ಒದಗಿಸುವುದಕ್ಕೆ ಸೂಕ್ತ ಕಾರ್ಯಕ್ರಮ ತೆಗೆದುಕೊಳ್ಳುತ್ತೀರಾ ?

† ಶ್ರೀ ಎಚ್.ಎಂ. ಚನ್ನಬಸಪ್ಪ.—ಮಾನ್ಯ ಸದಸ್ಯರಿಗೆ ಗೊತ್ತಿರುವ ಹಾಗೆ ಈಗಾಗಲೇ ಸೂಕ್ತ ಕಾರ್ಯಕ್ರಮವನ್ನು ತೆಗೆದುಕೊಂಡಿದ್ದೇವೆ.

ಶ್ರೀ ಎ. ಜಿ. ಕೊಡಗಿ.—ಸಾರಿಗೆ ಸಂಪರ್ಕಗಳನ್ನು ಒದಗಿಸಿಕೊಡಬೇಕಾದರೆ ರೂರಲ್ ಕಮ್ಯುನಿಕೇಷನ್ ಪ್ರೋಗ್ರಾಮ್ ಪ್ರಕಾರ ರಸ್ತೆಗಳನ್ನು ಮುಂಜೂರಾತಿ ಮಾಡುವುದಕ್ಕೆ ಹೋದಾಗ ಈ ವಿಷಯಗಳನ್ನು ತೆಗೆದುಕೊಳ್ಳುತ್ತೀರೆಂದು ನನ್ನ ಭಾವನೆ. ಆದರೆ ಮಲೆನಾಡು ಪ್ರದೇಶದಲ್ಲಿ ಸೇತುವೆಗಳು ಅವಶ್ಯಕವಿರುವುದರಿಂದ ಸಾರಿಗೆ ಸಂಪರ್ಕ ಸಂಪೂರ್ಣವಾಗಿ ಏಗಬೇಕಾದರೆ ಸೇತುವೆಗಳು ರಚನೆಯಾಗಬೇಕು. 76 ಸೇತುವೆಗಳು ರಚನೆಯಾಗಬೇಕು. 75 ಲಕ್ಷ ರೂಪಾಯಿ ವೆಚ್ಚಮಾಡಿ ವರ್ಷ ಒಂದಕ್ಕೆ ನಾಲ್ಕಾರು ಸೇತುವೆಗಳನ್ನು ತೆಗೆದುಕೊಂಡು ನಾಲ್ಕು ವರ್ಷಗಳಲ್ಲಿ ಎಲ್ಲಾ ಗ್ರಾಮಗಳಿಗೂ ಸಾರಿಗೆ ಸಂಪರ್ಕ ಒದಗಿಸುವ ಯೋಜನೆ ಹಾಕಿದ್ದೀರಾ ? ನಿರ್ದಿಷ್ಟವಾದ ಗುರಿ ಇಟ್ಟುಕೊಂಡಿದ್ದೀರಾ ? ಈ ಕೆಲಸಮಾಡುವುದಕ್ಕೆ ಭರವಸೆ ಕೊಡುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಸಭೆಯಲ್ಲಿ ಈಗಾಗಲೇ ಘೋಷಣೆ ಮಾಡಿದ್ದೇನೆ. ದೊಡ್ಡ ದೊಡ್ಡ ಸೇತುವೆಗಳು ಎಲ್ಲೆಲ್ಲಿ ನಮ್ಮ ರಾಜ್ಯದಲ್ಲಿ ಇವೆ. ಅವು ಎಲ್ಲವನ್ನೂ ಕೂಡ ತೆಗೆದು ಕಳ್ಳಲಕ್ಕೆ